## ಕರ್ನಾಟಕ ಸರ್ಕಾರ

ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-560012.

ಸಂಖ್ಯೆ: ಪಪೂಶಿಇ/ಪರೀಕ್ಷೆ/ದ್ವಿಪ್ರಾಪ/01/2021-22 ದಿನಾಂಕ:02-08-2021

## ಸುತ್ತೋಲೆ

ವಿಷಯ: 2020-21ನೇ ಸಾಲಿನ ದ್ವಿತೀಯ ಪಿ.ಯು.ಸಿ ಫಲಿತಾಂಶವನ್ನು ತಿರಸ್ಕರಿಸಿ ದ್ವಿತೀಯ ಪಿ.ಯು.ಸಿ ವಾರ್ಷಿಕ ಪರೀಕ್ಷೆಗೆ ನೋಂದಾಯಿಸಿಕೊಂಡ ಪ್ರಾಯೋಗಿಕ/ಆಂತರಿಕ ಅಂಕಗಳನ್ನು ಹೊಂದಿರುವ ವಿಷಯಗಳ ವಿದ್ಯಾರ್ಥಿಗಳಿಗೆ ಪ್ರಾಯೋಗಿಕ/ಆಂತರಿಕ ಪರೀಕ್ಷೆಗಳನ್ನು ನಡೆಸುವ ಕುರಿತು.

ಉಲ್ಲೇಖ: ಈ ಕಛೇರಿ ಸುತ್ತೋಲೆ ಸಂಖ್ಯೆ: ಪಪೂಶಿಇ/ಪರೀಕ್ಷೆ/ನೊ&ಫ/01/2021. ದಿನಾಂಕ: 20.07.2021

* * * *

2020-21ನೇ ಸಾಲಿನಲ್ಲಿ ದ್ವಿತೀಯ ಪಿ.ಯು.ಸಿ ವಾರ್ಷಿಕ ಪರೀಕ್ಷೆಗೆ ನೋಂದಾಯಿಸಿಕೊಂಡಿದ್ದ ಹೊಸ ವಿದ್ಯಾರ್ಥಿಗಳು(Freshers) ಮತ್ತು ಪುನರಾವರ್ತಿತ ವಿದ್ಯಾರ್ಥಿಗಳ(Repeaters) ಫಲಿತಾಂಶವನ್ನು ದಿನಾಂಕ:20.07.2021ರಂದು ಪ್ರಕಟಿಸಲಾಗಿದೆ. 2020-21ನೇ ಸಾಲಿನ ದ್ವಿತೀಯ ಪಿ.ಯು.ಸಿ ಘೋಷಿತ ಫಲಿತಾಂಶದಲ್ಲಿ ನೀಡಿರುವ ಅಂಕಗಳು ತೃಪ್ತಿಕರವಾಗದೇ ಇದ್ದ ಹೊಸ ವಿದ್ಯಾರ್ಥಿಗಳು(Freshers) ಹಾಗೂ ಪುನರಾವರ್ತಿತ ವಿದ್ಯಾರ್ಥಿಗಳು(Repeaters) ತಾವು ಇಚ್ಛಿಸುವ ವಿಷಯಗಳ ಫಲಿತಾಂಶವನ್ನು ತಿರಸ್ಕರಣೆ ಮಾಡಿ ಪರೀಕ್ಷೆಗೆ ಶುಲ್ಕರಹಿತವಾಗಿ ಅರ್ಜಿ ಸಲ್ಲಿಸಲು ಉಲ್ಲೇಖಿತ ಸುತ್ತೋಲೆಯಲ್ಲಿ ಅವಕಾಶವನ್ನು ಕಲ್ಪಿಸಲಾಗಿತ್ತು.

ಅದರಂತೆ 2020-21ನೇ ಸಾಲಿನಲ್ಲಿ ದ್ವಿತೀಯ ಪಿ.ಯು.ಸಿ ವಾರ್ಷಿಕ ಪರೀಕ್ಷೆಗೆ ನೋಂದಾಯಿಸಿಕೊಂಡು, ಫಲಿಂತಾಂಶವನ್ನು ಪಡೆದು, ಫಲಿತಾಂಶವನ್ನು ತಿರಸ್ಕರಿಸಿ ದಿನಾಂಕ:19.08.2021 ರಿಂದ 03.09.2021ರ ವರೆಗೆ ನಡೆಯುವ ದ್ವಿತೀಯ ಪಿ.ಯು.ಸಿ ವಾರ್ಷಿಕ ಪರೀಕ್ಷೆಗೆ ನೋಂದಾಯಿಸಿಕೊಂಡಿರುವ ಹೊಸ ವಿದ್ಯಾರ್ಥಿಗಳು(Freshers) ಪ್ರಾಯೋಗಿಕ/ಆಂತರಿಕ ಪರೀಕ್ಷೆಗಳನ್ನು ಹೊಂದಿರುವ ವಿಷಯಗಳ ಫಲಿತಾಂಶವನ್ನು ತಿರಸ್ಕರಿಸಿದ್ದಲ್ಲಿ, ಅಂತಹ ವಿದ್ಯಾರ್ಥಿಗಳಿಗೆ ಪರೀಕ್ಷೆ ತಿರಸ್ಕರಿಸಿರುವ ವಿಷಯಗಳಿಗೆ ಮಾತ್ರ ಈ ಕೆಳಕಂಡಂತೆ ಪ್ರಾಯೋಗಿಕ/ಆಂತರಿಕ ಪರೀಕ್ಷೆಗಳನ್ನು ನಡೆಸಲು ಸೂಚಿಸಿದೆ.

1. 2020-21ನೇ ಸಾಲಿನಲ್ಲಿ ದ್ವಿತೀಯ ಪಿ.ಯು.ಸಿ ವಾರ್ಷಿಕ ಪರೀಕ್ಷೆಯ ಫಲಿತಾಂಶವನ್ನು ಪ್ರಾಯೋಗಿಕ/ಆಂತರಿಕ ಪರೀಕ್ಷೆಗಳನ್ನು ಹೊಂದಿರುವ ವಿಷಯಗಳಲ್ಲಿ ತಿರಸ್ಕರಿಸಿರುವ ಹೊಸ ವಿದ್ಯಾರ್ಥಿಗಳಿಗೆ(Freshers) ಮಾತ್ರ ಪ್ರಾಯೋಗಿಕ/ಆಂತರಿಕ ಪರೀಕ್ಷೆಗಳನ್ನು ಕಾಲೇಜು ಹಂತಗಳಲ್ಲಿ ನಡೆಸುವುದು.
2. ಪುನರಾವರ್ತಿತ ವಿದ್ಯಾರ್ಥಿಗಳಿಗೆ ಪ್ರಾಯೋಗಿಕ/ಆಂತರಿಕ ಪರೀಕ್ಷೆಗಳನ್ನು **ನಡೆಸಲು ಅವಕಾಶ ಇರುವುದಿಲ್ಲ.**
3. ಈ ಅವಕಾಶ ದಿನಾಂಕ:19.08.2021 ರಿಂದ 03.09.2021ರ ವರೆಗೆ ನಡೆಯುವ ದ್ವಿತೀಯ ಪಿ.ಯು.ಸಿ ವಾರ್ಷಿಕ ಪರೀಕ್ಷೆಗೆ ನೋಂದಾಯಿಸಿಕೊಂಡಿರುವ ವಿದ್ಯಾರ್ಥಿಗಳಿಗೆ ಸೀಮಿತವಾಗಿದೆ.
4. ಪ್ರಾಯೋಗಿಕ/ಆಂತರಿಕ ಪರೀಕ್ಷೆಗಳನ್ನು ನಡೆಸಲು ಆಂತರಿಕ ಪರೀಕ್ಷಕರುಗಳನ್ನು ಕಾಲೇಜುಗಳ ಹಂತದಲ್ಲಿಯೇ ನಡೆಸುವುದು. ಸಂಬಂಧಪಟ್ಟ ವಿಷಯದ ಉಪನ್ಯಾಸಕರು ಆ ಕಾಲೇಜಿನಲ್ಲಿ ಲಭ್ಯವಿಲ್ಲದಿದ್ದಲ್ಲಿ



Scanned with CamScanner

ಉಪನಿರ್ದೇಶಕರು ಹತ್ತಿರದ ಕಾಲೇಜಿನ ಉಪನ್ಯಾಸಕರನ್ನು ನಿಯೋಜಿಸಿ ಪರೀಕ್ಷೆಯನ್ನು ನಡೆಸಲು ಕ್ರಮವಹಿಸುವುದು.

5. ಸದರಿ ವಿದ್ಯಾರ್ಥಿಗಳಿಗೆ ಪ್ರಾಯೋಗಿಕ/ಆಂತರಿಕ ಪರೀಕ್ಷೆಗಳನ್ನು ಇಲಾಖಾ ನಿಯಮಾನುಸಾರ ದಿನಾಂಕ:12.08.2021ರ ಒಳಗೆ ನಡೆಸುವುದು.
6. ಪ್ರಾಯೋಗಿಕ/ಆಂತರಿಕ ಪರೀಕ್ಷೆಗಳ ಅಂಕ ಪಟ್ಟಿಗಳನ್ನು(ಮ್ಯಾನುಯಲ್) ಇಲಾಖೆಯ ಕೇಂದ್ರ ಕಛೇರಿಯ ಗಣಕಶಾಖೆಯಲ್ಲಿ ದಾಖಲಿಸಬೇಕಾಗಿರುವುದರಿಂದ, ಪ್ರಾಯೋಗಿಕ/ಆಂತರಿಕ ಪರೀಕ್ಷೆಗಳು ಮುಕ್ತಾಯಗೊಂಡ ನಂತರ ಸಂಬಂಧಪಟ್ಟ ಕಾಲೇಜುಗಳ ಪ್ರಾಂಶುಪಾಲರು ಪ್ರಾಯೋಗಿಕ/ಆಂತರಿಕ ಪರೀಕ್ಷೆಗಳ ಅಂಕ ಪಟ್ಟಿಗಳನ್ನು(ಮ್ಯಾನುಯಲ್) ಉತ್ತರಪತ್ರಿಕೆಗಳ ಸಹಿತ ಜಿಲ್ಲಾ ಉಪನಿರ್ದೇಶಕರಿಗೆ ದಿನಾಂಕ:13.08.2021ರ ಒಳಗೆ ತಲುಪಿಸುವುದು.
7. ಸದರಿ ವಿದ್ಯಾರ್ಥಿಗಳು ಪ್ರಾಯೋಗಿಕ/ಆಂತರಿಕ ಪರೀಕ್ಷೆ ಬರೆಯಲು/ಹಾಜರಾಗಲು ಸಾಧ್ಯವಾಗದಿದ್ದಲ್ಲಿ ಅಥವಾ ಪರೀಕ್ಷೆಗೆ ಹಾಜರಾಗಲು ಇಚ್ಛಿಸದಿದ್ದಲ್ಲಿ ದಿನಾಂಕ:20.07.2021ರಂದು ಘೋಷಿಸಿರುವ ಫಲಿತಾಂಶದಲ್ಲಿನ ಪ್ರಾಯೋಗಿಕ/ಆಂತರಿಕ ಅಂಕಗಳನ್ನೆ ಪಡೆದುಕೊಳ್ಳಬೇಕು.
8. ಜಿಲ್ಲಾ ಉಪನಿರ್ದೇಶಕರುಗಳು ತಮ್ಮ ಜಿಲ್ಲಾ ವ್ಯಾಪ್ತಿಯಲ್ಲಿನ ಕಾಲೇಜುಗಳಲ್ಲಿ ಪ್ರಾಯೋಗಿಕ/ಆಂತರಿಕ ಪರೀಕ್ಷೆಗಳ ಅಂಕ ಪಟ್ಟಿಗಳನ್ನು(ಮ್ಯಾನುಯಲ್) ಮತ್ತು ಉತ್ತರಪತ್ರಿಕೆಗಳನ್ನು ಪ್ರಾಂಶುಪಾಲರುಗಳಿಂದ ಸಂಗ್ರಹಿಸಿ, ದಿನಾಂಕ:14.08.2021ರ ಒಳಗೆ ಜಂಟಿ ನಿರ್ದೇಶಕರು(ಪರೀಕ್ಷೆ), ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು ಇವರಿಗೆ ತಲುಪಿಸುವುದು.
9. ಪ್ರಾಯೋಗಿಕ/ಆಂತರಿಕ ಪರೀಕ್ಷೆಗಳನ್ನು ಯಾವುದೇ ರೀತಿಯ ಲೋಪಗಳಿಗೆ ಅವಕಾಶ ನೀಡದಂತೆ ಪರೀಕ್ಷಾ ಗೌಪ್ಯತೆಯೊಂದಿಗೆ ನಡೆಸಲು ಕ್ರಮವಹಿಸುವುದು. ಈ ಬಗ್ಗೆ ಸಂಬಂಧಪಟ್ಟ ಜಿಲ್ಲಾ ಉಪನಿರ್ದೇಶಕರುಗಳು ಮತ್ತು ಸಂಬಂಧಪಟ್ಟ ಕಾಲೇಜುಗಳ ಪ್ರಾಂಶುಪಾಲರು ಹೆಚ್ಚು ನಿಗಾವಹಿಸುವುದು.

Snehal

ನಿರ್ದೇಶಕರು

ಪದವಿ ಪೂರ್ವ ಶಿಕ್ಷಣ ಇಲಾಖೆ.

**ಸೂಕ್ತ ಕ್ರಮಕ್ಕಾಗಿ,**

1. ಪದವಿ ಪೂರ್ವ ಶಿಕ್ಷಣ ಇಲಾಖೆಯ ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರಿಗೆ – ಮಾಹಿತಿಗಾಗಿ ಹಾಗೂ ಒಂದು ಪ್ರತಿಯನ್ನು ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲು ತಿಳಿಸಿದೆ.
2. ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ/ಅನುದಾನರಹಿತ/ವಿಭಜಿತ/ಕಾರ್ಪೊರೇಷನ್ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರಿಗೆ.
3. ಸಹಾಯಕ ನಿರ್ದೇಶಕರು, ಗಣಕ ಶಾಖೆ.
4. ಸಹಾಯಕ ನಿರ್ದೇಶಕರು, ಇಲಾಖಾ ಇ-ಆಡಳಿತ ಶಾಖೆ.-ಇಲಾಖೆ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.

**ಪ್ರತಿಗಳು:**

1. ಪರೀಕ್ಷಾ ಶಾಖೆಯ ಎಲ್ಲಾ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರಿಗೆ.
2. ಕಛೇರಿ ಪ್ರತಿ.



Scanned with CamScanner